ಕಥೋಪದೇಶ

ಲೋಭವೇ ಪಾಪಕ್ಕೆ ಮೂಲ

ಒಮ್ಮೆ ಪರೀಸ ಭಾಗವತರಿಗೆ ರಸ್ತೆಯಲ್ಲಿ ಸ್ಪರ್ಶಮಣಿ ಸಿಕ್ಕಿತು. ಅದನ್ನು ಮನೆಗೆ ತಂದು, ಹೆಂಡತಿಗೆ ತೋರಿಸಿದರು. ಹೆಂಡತಿ ತನ್ನ ನೆಚ್ಚಿನ ಗೆಳತಿ ರಾಜಾಯಿಯ ಬಳಿಗೆ ಅದನ್ನು ತೆಗೆದುಕೊಂಡು ಓಡಿದಳು. ರಾಜಾಯಿ ಸಂತ ನಾಮದೇವರ ಹೆಂಡತಿ. ಅವಳಿಗೆ ಈ ಸ್ಪರ್ಶಮಣಿ ದೊರೆತರೆ ಅವರ ಜೀವನ ಸುಧಾರಿಸಬಹುದೆಂದು ಭಾವಿಸಿ ಪರೀಸರ ಹೆಂಡತಿ ಹೇಳಿದಳು : "ಲೋಹವನ್ನು ಇದರಿಂದ ಮುಟ್ಟಿಸಿದರೆ ಅದು ಚಿನ್ನವಾಗಿಬಿಡುವುದು. ನಿನಗೆ ಬೇಕಾದಷ್ಟನ್ನು ಚಿನ್ನವಾಗಿಸಿಕೊಂಡು ಅನಂತರ ಹಿಂತಿರುಗಿಸು." ರಾಜಾಯಿ ಮಣಿಯ ಸಹಾಯದಿಂದ ಬಹಳಷ್ಟು ಚಿನ್ನವನ್ನು ಗಳಿಸಿಕೊಂಡು ಅದರಿಂದ ಬೇಕಾದಷ್ಟು ಧಾನ್ಯ ಮತ್ತು ಇತರ ವಸ್ತುಗಳನ್ನೂ ಕೊಂಡುಕೊಂಡಳು.

ನಾಮದೇವರು ಮನೆಗೆ ಹಿಂತಿರುಗಿ ಬಂದಾಗ ಅನೇಕ ಭಕ್ಷ್ಯಾದಿಗಳನ್ನು ಕಂಡು ಆಶ್ಚರ್ಯಪಟ್ಟರು. ಕಾರಣ ಕೇಳಿದಾಗ ರಾಜಾಯಿ ಎಲ್ಲವನ್ನೂ ತಿಳಿಸಿದಳು. "ಇದು ನನಗೆ ಯೋಗ್ಯವಾದ ಆಹಾರವಲ್ಲ, ಇದನ್ನು ಬಡವರಿಗೆ ಹಂಚುವುದೇ ಉಚಿತ. ಈ ಮಣಿಯು ಲೋಭದ ಮೂಲವಾದ್ದರಿಂದ ಇದನ್ನು ನದಿಗೆ ಬಿಸಾಡುವುದೇ ಲೇಸು" ಎಂದು ಹೇಳುತ್ತ ಮಣಿಯನ್ನು ಹೆಂಡತಿಯಿಂದ ಪಡೆದುಕೊಂಡು ಅದನ್ನು ಚಂದ್ರಭಾಗಾ ನದಿಯಲ್ಲಿ ಬಿಸಾಡಿದರು.

ಪರೀಸ ಭಾಗವತರು ತಮ್ಮ ಹೆಂಡತಿಯನ್ನು ಸ್ಪರ್ಶಮಣಿಯ ಬಗ್ಗೆ ಸಂಜೆ ಕೇಳಿದಾಗ ಅವಳು ಅದನ್ನು ನಾಮದೇವರ ಮನೆಗೆ ಕೊಟ್ಟಿರುವುದಾಗಿ ತಿಳಿಸಿದಳು. ಪರೀಸರು ನಾಮದೇವರ ಮನೆಗೆ ಬಂದು ಅತನ ಹೆಂಡತಿಯನ್ನು ಸ್ಪರ್ಶಮಣಿಯನ್ನು ಹಿಂತಿರುಗಿಸುವಂತೆ ಕೇಳಿದರು. ಆಕೆ ತನ್ನ ಪತಿ ಆ ಸ್ಪರ್ಶಮಣಿಯನ್ನು ತನ್ನಿಂದ ತೆಗೆದುಕೊಂಡು ಅದನ್ನು ನದಿಯಲ್ಲಿ ಬಿಸಾಡಲು ಹೊರಟಿರುವರು ಎಂದು ತಿಳಿಸಿದ ಕೂಡಲೇ ನಾಮದೇವರನ್ನು ಅರಸುತ್ತ ನದಿಯ ಬಳಿಗೆ ಧಾವಿಸಿದರು. ನಾಮದೇವರನ್ನು ಕಂಡು ಮಣಿಯನ್ನು ಹಿಂದಿರುಗಿಸುವಂತೆ ಕೇಳಿದಾಗ ಅವರು "ಓಹೋ! ಆ ಲೋಭದ ಮೂಲ ಬೇಕೆ? ಅದು ನದಿಯ ಪಾಲಾಯಿತು" ಎಂದು ಶಾಂತವಾಗಿ ನುಡಿದರು. ಪರೀಸರು ಕೋಪದಿಂದ ನಾಮದೇವರನ್ನು ಹೀನಾಮಾನವಾಗಿ ಬೈಯಲು ಆರಂಭಿಸಿದರು.

ನಾಮದೇವರು ನದಿಯಲ್ಲಿ ಕೈಹಾಕಿ ಒಂದು ಕಲ್ಲನ್ನು ತೆಗೆದು ಹತ್ತಿರದಲ್ಲಿದ್ದ ಬಿಂದಿಗೆಗೆ ಮುಟ್ಟಿಸಿದರು. ಬಿಂದಿಗೆ ಚಿನ್ನವಾಗುವುದನ್ನು ಆಶ್ಚರ್ಯದಿಂದ ಪರೀಸ ನೋಡಿದರು. ಭಗವದ್ಭಕ್ತನಿಗೆ ಎಲ್ಲವೂ ಸುಲಭಸಾಧ್ಯ ಎಂದು ಪರೀಸರು ಈಗ ಕಂಡುಕೊಂಡರು. ನಾಮದೇವರು ನುಡಿದಂತೆ ಲೋಭದಿಂದ ದೂರವಿರುವುದೇ ಲೇಸೆಂದು ಬಗೆದು ತಮಗೆ ಅವರು ಕೊಟ್ಟ ಆ ಕಲ್ಲನ್ನು ಪರೀಸರು ಕೂಡಲೇ ನದಿಗೆ ಬಿಸಾಡಿದರು.